ಸಮತೆಯೆಡೆಗೆ ನಮ್ಮ ನಡಿಗೆ

ಕರ್ನಾಟಕ ರಾಜ್ಯ

# ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

ವಿಜಯನಗರ ಜಿಲ್ಲೆ

## ‘ಸಹಬಾಳ್ವೆ, ಸಮಾನ ಗೌರವ; ಕೂಡಿ ಕಟ್ಟುವ ನ್ಯಾಯದ ಜಗವ’

### ಮಾರ್ಚ್ 7, 8, 2025: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ವಿಜಯನಗರ (ಹೊಸಪೇಟೆ)

‘ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ’ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಹನ್ನೆರೆಡು ವರ್ಷಗಳಿಂದ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುವುದರೊಂದಿಗೆ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳವಳಿ–ಸಾಹಿತ್ಯ–ಶಿಕ್ಷಣ ಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪದ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ, ಪೌರಕಾರ್ಮಿಕರು, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರು–ಮನೆಕೆಲಸದ ಕಾರ್ಮಿಕರು, ಗಾರ್ಮೆಂಟ್ ಮತ್ತು ಇನ್ನಿತರ ಕಾರ್ಮಿಕರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕಾಡೆಮಿಕ್ ವಲಯದ ಸಮಾನ ಮನಸ್ಕರು ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದಲ್ಲಿ ಭಾಗಿಯಾಗಿವೆ. ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದಲ್ಲಿ ಭಾಗಿಯಾಗಬಹುದು.

2012ರಲ್ಲಿ ಮಂಗಳೂರಿನಲ್ಲಿ ಹೋಂ ಸ್ಟೇ ದಾಳಿ ಪ್ರಕರಣ ಮತ್ತು ದೆಹಲಿಯಲ್ಲಿ ನಡೆದ ನಿರ್ಭಯಾ ಅತ್ಯಾಚಾರ, ಅದಕ್ಕೂ ಮುನ್ನ ನಡೆದ ಸಾವಿರಾರು ಬರ್ಬರ ಲೈಂಗಿಕ ದೌರ್ಜನ್ಯದ ಪ್ರಕರಣಗಳು ದೇಶಾದ್ಯಂತ ಪ್ರತಿಭಟನೆ ಭುಗಿಲೇಳಲು ಕಾರಣವಾದವು. ಆ ವೇಳೆಯಲ್ಲಿ ‘ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ’ ಮಂಗಳೂರಿನಲ್ಲಿ ರಚನೆಯಾಯಿತು. ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ, ಲಿಂಗ ತಾರತಮ್ಯ, ಅಸಮಾನತೆಗಳನ್ನು ‘ಇನ್ನು ಸಾಕು’ ಎಂಬ ಘೋಷವಾಕ್ಯವನ್ನಿಟ್ಟುಕೊಂಡು ಮಂಗಳೂರಿನಲ್ಲಿ 2013ರಲ್ಲಿ ಮೊದಲ ಸಾರ್ವಜನಿಕ ಸಮಾವೇಶ ನಡೆಸಿತು. ಸಮಾವೇಶದ ಬಳಿಕ ರಾಜ್ಯದಾದ್ಯಂತ ಇರುವ ಮಹಿಳಾಪರ ಸಂಘಟನೆಗಳು ಒಗ್ಗೂಡಿ “ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ” ನಿರ್ಮಾಣವಾಯಿತು. ಅಲ್ಲಿಂದ ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ‘ಮಹಿಳಾ ಚೈತನ್ಯ ದಿನ’ವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶವನ್ನು ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಮಂಡ್ಯ, ಕೋಲಾರ, ಕಲಬುರಗಿ, ತುಮಕೂರು, ಉಡುಪಿಗಳಲ್ಲಿ ಹನ್ನೆರೆಡು ಸಮಾವೇಶಗಳನ್ನು ನಡೆಸಲಾಗಿದೆ. 2025ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳನ್ನು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಜಯನಗರವೆಂಬ ಜಿಲ್ಲೆಯ ರಚನೆಯಾದದ್ದು 2021ರಲ್ಲಿ. ದೇಶ ಸ್ವತಂತ್ರವಾದಾಗಿನಿಂದ ಇದ್ದ ಬಳ್ಳಾರಿ ಜಿಲ್ಲೆಯ ಭೂಭಾಗವನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ ಭಾಗಮಾಡಿ ಪೂರ್ವಭಾಗವನ್ನು ಮಾತ್ರ ಬಳ್ಳಾರಿ ಜಿಲ್ಲೆ ಎಂದು, ಪಶ್ಚಿಮ ಭಾಗವನ್ನು ವಿಜಯನಗರ ಜಿಲ್ಲೆಯೆಂದೂ ನಾಮಕರಣ ಮಾಡಲಾಯಿತು. ಹೊಸಪೇಟೆ ಪಟ್ಟಣವನ್ನು ವಿಜಯನಗರ ಜಿಲ್ಲೆಯ ಕೇಂದ್ರವಾಗಿಸಲಾಯಿತು.

ಶಿಲಾಯುಗ ಕಾಲದಿಂದ ಮಾನವ ವಸತಿಯ ಕುರುಹುಗಳನ್ನು ಉಳಿಸಿಕೊಂಡಿರುವ ಈ ಜಿಲ್ಲೆಯ ಸಂಸ್ಕೃತಿ, ನಾಗರಿಕತೆ, ಚರಿತ್ರೆ, ವರ್ತಮಾನಗಳಿಗೆ ಸಾಕ್ಷಿಯೆಂಬಂತೆ ಹರಿಯುತ್ತಿರುವ ನದಿ ತುಂಗಭದ್ರೆ. ಹಂಪಿಯ ಮಾತಂಗಿ ಬೆಟ್ಟವು ಮಾತೃ ಸಂಸ್ಕೃತಿಯ ಮೂಲ ನೆಲೆಯಾಗಿದೆ. ಮೈಲಾರಲಿಂಗನ ಮಹಾಕಾವ್ಯ ಪ್ರಸ್ತಾಪಿಸುವ ಮೈಲಾರನ ಮೂವರು ಮಡದಿಯರ ಕಥನವು ಈ ಭಾಗದ ನಾಗರಿಕತೆಯ ಮೂರು ಹಂತಗಳ ಚರಿತ್ರೆಯ ಕಥಾನಕವಾಗಿದೆ. ಮೂಲತಃ ಕೃಷಿಕರಾಗಿ, ನೆಲವನ್ನು ಹೊಲವನ್ನಾಗಿಸಿ ಆದಿಮ ಕೃಷಿ ಸಂಸ್ಕೃತಿಯನ್ನು ರೂಪಿಸಿದ ತಳ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಜಿಲ್ಲೆಯ ದೈವಾಚರಣೆಗಳ ಅಧ್ಯಯನದ ಮೂಲಕ ವಿಶ್ಲೇಷಿಸಬಹುದಾಗಿದೆ. ಒಂದೆಡೆ ಮಲ್ಲರನ್ನು ಅರಿದು ಮಲ್ಲಾರಿಯಾದರೆ ಅತ್ತ ಬಳನೆಂಬವನನ್ನು ಅರಿದ ದೇವತೆ ‘ಬಳಾರಿ’ಯಾದಳು. ಕೊಟ್ಟೂರು ಎಂಬ ಹೆಸರು ಬರಲು ಕಾರಣ ಕೊಟ್ಟವ್ವೆ ಎಂಬ ಜೈನ ಯೋಗಿನಿ. ಸಾಮ್ರಾಟ ಅಶೋಕನ ಕಾಲದಲ್ಲೇ ಇಲ್ಲಿ ಬೌದ್ಧ ಧಮ್ಮ ನೆಲೆ ಹೊಂದಿತ್ತು. ಜೈನಯತಿಗಳ, ಅನುಯಾಯಿಗಳ ಆವಾಸವೂ ಆಯಿತು. ಜಿಲ್ಲೆಯ ತತ್ವಪದಕಾರರು–ಸೂಫಿ–ಶರಣ ಶರಣೆಯರ ಪರಂಪರೆಯೂ ಹಿರಿದಾದದ್ದು. ಶಾತವಾಹನರಿಂದ ಹಿಡಿದು ವಿಜಯನಗರ ಸಾಮ್ರಾಜ್ಯ, ಟಿಪ್ಪು ಸುಲ್ತಾನನವರೆಗೆ ರಾಜಮನೆತನಗಳ ನೆರವಿನಿಂದ ಕುಶಲಿ ಶ್ರಮಿಕರು ಕಟ್ಟಿದ ಸೂಕ್ಷ್ಮ ಕೆತ್ತನೆಯ ಹಲವು ರಚನೆಗಳು ಜಿಲ್ಲೆಯಾದ್ಯಂತ ಇವೆ. ಎಷ್ಟೋ ರಾಣಿಯರು ಕಟ್ಟಿಸಿದ, ಕೆರೆಗೆ ಹಾರವಾಗಿ ಮಹಿಳೆಯರು ಬಲಿಯಾದ ಕೆರೆಗಳು ಜಿಲ್ಲೆಯಾದ್ಯಂತ ಇವೆ. ವಸಾಹತುಶಾಹಿಗಳ ಆಗಮನದ ಬಳಿಕ ಈ ಪ್ರದೇಶವು ಬ್ರಿಟಿಶ್ ಸೈನ್ಯದ ದಂಡು ಪ್ರದೇಶವಾಯಿತು. ಎಂದೇ ಸ್ವಾತಂತ್ರ್ಯ ಚಳುವಳಿಯಲ್ಲಿ ಗಮನಾರ್ಹ ಪಾತ್ರ ವಹಿಸಿತು. ಬಳ್ಳಾರಿಯ ಸಿದ್ದಮ್ಮ ಮೊದಲಾಗಿ ಅನೇಕ ಮಹಿಳೆಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಕರ್ನಾಟಕ ಏಕೀಕರಣ ಚಳುವಳಿಯೂ ಭರದಿಂದ ಮೈದಳೆಯಿತು. ರಂಗಭೂಮಿಯ ಚರಿತ್ರೆಯಲ್ಲಿ ಮರಿಯಮ್ಮಹಳ್ಳಿಯ ರಂಗನಟಿ ನಾಗರತ್ನಮ್ಮ, ಜೋಗತಿ ಮಂಜಮ್ಮ, ಪದ್ಮಾ ಕೂಡ್ಲಿಗಿಯವರಂತೆ ಹೆಸರಾಗಿರುವ ಹಲವರಿದ್ದಾರೆ.

ಹೀಗೆ ಚರಿತ್ರೆ, ಹೋರಾಟ, ಜಾಗೃತಿ, ಕಲೆ, ಸಂಸ್ಕೃತಿಗಳ ದೃಷ್ಟಿಯಿಂದ ಸಿರಿವಂತ ಜಿಲ್ಲೆಯಾದ ವಿಜಯನಗರದಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2025ರ ಮಹಿಳಾ ಚೈತನ್ಯ ದಿನವನ್ನು 'ಸಹಬಾಳ್ವೆ, ಸಮಾನ ಗೌರವ; ಕೂಡಿ ಕಟ್ಟುವ ನ್ಯಾಯದ ಜಗವ' ಎಂಬ ಘೋಷವಾಕ್ಯವನ್ನಿಟ್ಟುಕೊಂಡು ಆಚರಿಸುತ್ತಿದೆ. ಸಮಾನ ಮನಸ್ಕ ಸಂಘಟನೆ, ಸಂಸ್ಥೆ, ವ್ಯಕ್ತಿಗಳೊಡಗೂಡಿ ಚಾರಿತ್ರಿಕ ಮೈಲುಗಲ್ಲಾಗುವಂತಹ ಸಮಾವೇಶ ನಡೆಸಲು ಭರದ ಸಿದ್ಧತೆಗಳು ನಡೆದಿವೆ.

**ನಮ್ಮ ನಡಿಗೆ ಸಮತೆಯೆಡೆಗೆ:**

ಲಾಭ ದೋಚುವ ನವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕಾರಣ–ಧರ್ಮ–ಜಾತಿವ್ಯವಸ್ಥೆ–ಪಿತೃ ಪ್ರಾಧಾನ್ಯತೆಯೂ ಕೈಜೋಡಿಸಿರುವುದರ ಪರಿಣಾಮವಾಗಿ, ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆಯರು ಧರ್ಮ/ಕೋಮು/ಜಾತಿ ವೈಷಮ್ಯಗಳಿಗೆ ದಾಳವಾಗಿ ಬಳಕೆಯಾಗುತ್ತಿದ್ದಾರೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಂಗಸರನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃ ಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳನ್ನು ಇಮ್ಮಡಿಗೊಳಿಸಿವೆ. ಸ್ತ್ರೀಭ್ರೂಣಹತ್ಯೆ, ಅತ್ಯಾಚಾರ, ಜಾತಿ–ಧರ್ಮ–ಲಿಂಗತ್ವದ ಹೆಸರಿನಲ್ಲಿ ದೌರ್ಜನ್ಯಗಳು ಎಗ್ಗಿಲ್ಲದೆ ಸಂಭವಿಸುತ್ತಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಲಿಂಗ ಸಮಾನತೆಯನ್ನು ಚುನಾವಣಾ ಪ್ರಣಾಳಿಕೆಗಳಿಗಷ್ಟೇ ಸೀಮಿತಗೊಳಿಸಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರಗಳಲ್ಲಿಯೂ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಾಧಾನ್ಯತೆ, ಮತಾಂಧತೆ ಮತ್ತು ಇವುಗಳಿಗೆ ಪೂರಕವಾಗಿರುವ ಅಧಿಕಾರ ರಾಜಕಾರಣವು ವಿಕೃತ ಹಿಂಸೆಯನ್ನು ಹುಟ್ಟು ಹಾಕುತ್ತಿವೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಇಲ್ಲವಾಗಿಸಲು, ಸಮಸಮಾಜ ಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ ತುರ್ತು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವಾಗಿದೆ. **'ಸಮತೆಯೆಡೆಗೆ ನಮ್ಮ ನಡಿಗೆ'** ಧ್ಯೇಯವಾಕ್ಯವಾಗಿದೆ.

ಭಾರತದ ಮಹಿಳೆಯರು ತಮ್ಮ ಕುಟುಂಬಗಳ ಜೊತೆಜೊತೆಗೆ ದೇಶ ಕಟ್ಟುವ ಕೆಲಸದಲ್ಲೂ ಸಕ್ರಿಯವಾಗಿ ತೊಡಗಿದವರು. ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ಸಾವಿತ್ರಿಬಾಯಿ ಫುಲೆಯವರಂತಹ ಹತ್ತಾರು ಧೀಮಂತೆಯರು ರಚನಾತ್ಮಕ ಸಮಾಜ ನಿರ್ಮಾಣಕ್ಕಾಗಿ ತಮ್ಮನ್ನು ತಾವು ತೆತ್ತುಕೊಂಡಿದ್ದಾರೆ. ಸ್ವಾತಂತ್ರ್ಯ ಚಳವಳಿಯಲ್ಲೂ ಜಾತಿ, ಮತ, ಧರ್ಮ, ಭಾಷೆಗಳ ಹಂಗು ತೊರೆದ ಭಾರತೀಯ ಮಹಿಳೆಯರು ಆಂದೋಲನಕ್ಕೆ ಶಕ್ತಿ ತುಂಬಿದ್ದಾರೆ. ಸ್ವಾತಂತ್ರ್ಯ ಆಂದೋಲನ ಮತ್ತು ಸಂವಿಧಾನದ ಆಶಯಗಳಿಗೆ ತಕ್ಕಂತೆ ಈ ದೇಶವನ್ನು ಕಟ್ಟಿ, ಬೆಳೆಸುವುದಕ್ಕೆ ನಾವು ಈಗಲೂ ಬದ್ಧರಾಗಿದ್ದೇವೆ. ವಿಶ್ವ ಸಹೋದರಿತ್ವದ ಪರಿಕಲ್ಪನೆಯನ್ನು ನಂಬುವ ಮಹಿಳಾ ಚಳವಳಿಯು ಮತ–ಧರ್ಮಗಳ ಆಧಾರದಲ್ಲಿ ಸಮಾಜ ಒಡೆಯುವುದನ್ನು ಖಂಡಿಸುತ್ತದೆ. ಸರ್ವರ ಸಮಾನತೆ, ಏಳಿಗೆಯನ್ನು ಸಾಧಿಸಬಯಸುವ ಸಂವಿಧಾನದಲ್ಲಿ ನಂಬಿಕೆ ಇರಿಸಿರುವವರೆಲ್ಲರೂ ಸರ್ವಜನಾಂಗದ ಶಾಂತಿಯ ತೋಟವಾದ ಭಾರತದ ಪ್ರಜೆಗಳು ಎಂಬುದು ನಮ್ಮ ಅಚಲ ನಂಬಿಕೆಯಾಗಿದೆ.

ಇಂಥ ಆಶಯಗಳನ್ನು ಹೊತ್ತು ಒಕ್ಕೂಟವು ಈ ಬಾರಿ ವಿಜಯನಗರ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಇದಕ್ಕೆ ಪೂರ್ವಭಾವಿಯಾಗಿ 'ಅರಿವಿನ ಪಯಣ' ಎಂಬ ಲಿಂಗಸೂಕ್ಷ್ಮತೆ ಬೆಳೆಸುವ ಕಾರ್ಯಕ್ರಮಗಳನ್ನು ಕಳೆದ ಆರು ತಿಂಗಳಿನಿಂದ ಶಾಲಾಕಾಲೇಜು, ಹಾಸ್ಟೆಲುಗಳಲ್ಲಿ ಹಾಗೂ ಸಮುದಾಯದ ನಡುವೆ ನಡೆಸುತ್ತಿದೆ. ಜಾಗೃತಿ ಅಭಿಯಾನಗಳಲ್ಲಿ ಯುವಜನರ ಭಾಗೀದಾರಿಕೆಯು ಉತ್ಸಾಹ ಇಮ್ಮಡಿಗೊಳಿಸುವಂತಿವೆ. ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿಭಟಿಸುವ, ಸಹಬಾಳುವೆಯ ಸೌಹಾರ್ದ ಬದುಕಿಗೆ ಒತ್ತಾಯಿಸುವ, ಯುದ್ಧವೇ ಮೊದಲಾದ ಹಿಂಸೆಯನ್ನು ವಿರೋಧಿಸುವ **'ಕಪ್ಪು ಉಡುಗೆಯಲ್ಲಿ ಮಹಿಳೆಯರು'** ('ವಿಮೆನ್ ಇನ್ ಬ್ಲಾಕ್') ಮೌನಜಾಗೃತಿ ಕಾರ್ಯಕ್ರಮವನ್ನು **'ಸರ್ವಜನಾಂಗದ ಶಾಂತಿಯ ದೇಶ'** ಎಂಬ ಘೋಷವಾಕ್ಯದೊಂದಿಗೆ ಎಲ್ಲಾ ತಾಲೂಕುಗಳಲ್ಲೂ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಇದರಲ್ಲಿ ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಹಾಗೂ ಸಮಾನ ಮನಸ್ಕ ಸೋದರಿ–ಸೋದರರು ಜೊತೆಗೂಡಲಿದ್ದಾರೆ. ಕರ್ನಾಟಕದ ಮೂಲೆಮೂಲೆಗಳಿಂದ ಎಲ್ಲ ಸಹೋದರಿಯರನ್ನು, ಮಾನವೀಯ ಮನಸ್ಸುಗಳನ್ನು ಸ್ವಾಗತಿಸಲು ವಿಜಯನಗರವು ಸಜ್ಜಾಗಿದೆ.

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ–2025: ಕಾರ್ಯಕ್ರಮಗಳ ವಿವರ**

**ಕಪ್ಪು ಉಡುಗೆಯಲ್ಲಿ ಮಹಿಳೆಯರು: ತಾಲೂಕಾವಾರು ಕಾರ್ಯಕ್ರಮಗಳ ವಿವರ**

ಜನವರಿ 31 – ಕೂಡ್ಲಿಗಿ; ಫೆಬ್ರವರಿ 7 – ಹೂವಿನ ಹಡಗಲಿ; ಫೆಬ್ರವರಿ 14 – ಕೊಟ್ಟೂರು; ಫೆಬ್ರವರಿ 21 – ಹಗರಿಬೊಮ್ಮನಹಳ್ಳಿ; ಫೆಬ್ರವರಿ 28 – ಹರಪನಹಳ್ಳಿ.

**ಮಾರ್ಚ್ 7, 2025ರ ಶುಕ್ರವಾರ 'ಮಹಿಳಾ ಘನತೆ: ಆಯಾಮಗಳು'** ಎಂಬ ವಿಚಾರ ಸಂಕಿರಣ ಹೊಸಪೇಟೆಯ ಪಟೇಲ್ ನಗರದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 9.30 ಗಂಟೆಯಿಂದ ನಡೆಯಲಿದೆ. ದಿಕ್ಸೂಚಿ ಭಾಷಣಕಾರ್ತಿಯಾಗಿ ಗಣಿಗಾರಿಕೆ ಮತ್ತು ಮಾನವ ಹಕ್ಕುಗಳ ಮೇಲೆ ಕೆಲಸ ಮಾಡುತ್ತಿರುವ ಹೈದರಾಬಾದಿನ ಭಾನುಮತಿ ಕಲ್ಲೂರಿ ಪಾಲ್ಗೊಳ್ಳುವರು. ಬಳಿಕ ರಾಜ್ಯದಾದ್ಯಂತದ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಮಂಡನೆ, ಸಂವಾದ ನಡೆಯಲಿದೆ. ಅಂದು ಸಂಜೆ 6 ಗಂಟೆಯಿಂದ 7ರ ತನಕ ಹೊಸಪೇಟೆಯ ಅಂಬೇಡ್ಕರ್ ವೃತ್ತದಲ್ಲಿ ಬೆಳಕಿನೊಂದಿಗೆ **'ಕಪ್ಪು ಉಡುಗೆಯಲ್ಲಿ ಮಹಿಳೆಯರು'** ಮೌನ ಜಾಗೃತಿ ಕಾರ್ಯಕ್ರಮವು 'ಸರ್ವ ಜನಾಂಗದ ಶಾಂತಿಯ ದೇಶ' ಎಂಬ ಘೋಷವಾಕ್ಯದೊಡನೆ ನಡೆಯಲಿದೆ.

**ಮಾರ್ಚ್ 8, 2025ರ ಶನಿವಾರ** ಬೆಳಿಗ್ಗೆ 10 ಗಂಟೆಗೆ ಹೊಸಪೇಟೆಯ ಬಳ್ಳಾರಿ ರಸ್ತೆಯ ಪಟೇಲ್ ಹೈಸ್ಕೂಲ್ ಮೈದಾನದಿಂದ ಜಿಲ್ಲಾ ಕ್ರೀಡಾಂಗಣದವರೆಗೆ **ಹಕ್ಕೊತ್ತಾಯ ಜಾಥಾ, ಮೆರವಣಿಗೆ** ನಡೆಯಲಿದೆ. ಬಳಿಕ ನೆರೆಯುವ ಸಾರ್ವಜನಿಕ ಸಮಾವೇಶದಲ್ಲಿ ಭಾರತೀಯ ಮುಸ್ಲಿಂ ಮಹಿಳಾ ಆಂದೋಲನವನ್ನು ಕಟ್ಟಿ, ಮುನ್ನಡೆಸುತ್ತಿರುವ ಗುಜರಾತಿನ ಝುಕಿಯಾ ಸೋಮನ್, ಸರಳ, ತತ್ವಬದ್ಧ ಬದುಕನ್ನು ಕಟ್ಟಿಕೊಂಡಿರುವ

ಗಾಯಕಿ, ಹೋರಾಟಗಾರ್ತಿ, ಸಮಾಜವಾದಿ ಸಂಸದರಾಗಿದ್ದ ಕಿಶನ್ ಪಟ್ನಾಯಕ್ ಅವರ ಬಾಳಸಂಗಾತಿ ಒಡಿಶಾದ ಬಾನಿ ಮಂಜರಿ ದಾಸ್ ನಮ್ಮೊಡನಿರಲಿದ್ದಾರೆ. ರಾಜ್ಯದೆಲ್ಲೆಡೆಯಿಂದ ಸಾವಿರಾರು ಯುವಜನರು, ಮಹಿಳಾಪರ, ನ್ಯಾಯಪರ ಮನಸುಗಳು ಕೈಜೋಡಿಸಲಿವೆ.

**ನಮ್ಮ ಹಕ್ಕೊತ್ತಾಯಗಳು :**

1. ಸಾಂವಿಧಾನಿಕ ಮೌಲ್ಯಗಳು ಸ್ಥಾಪಿತಗೊಂಡು ಜೊತೆಗೂಡಿ ಬಾಳುವ ಸೆಕ್ಯುಲರ್ ಭಾರತ ಬಲಗೊಳ್ಳಬೇಕು.
2. ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳರ್ನಿಲ್ಲಬೇಕು.
3. ಸರ್ಕಾರ ರಚನೆ ಮತ್ತು ರಾಜಕೀಯ ರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ, ಎಲ್ಲ ಹಂತಗಳಲ್ಲೂ ಸಾಮಾಜಿಕ ನ್ಯಾಯವನ್ನು ಆಧರಿಸಿದ 50% ಮಹಿಳಾ ಪ್ರತಿನಿಧಿತ್ವ ಕಡ್ಡಾಯವಾಗಿ ಜಾರಿಯಾಗಬೇಕು. ಅರ್ಥಪೂರ್ಣ ಮಹಿಳಾ ನಾಯಕತ್ವ ಬೆಳೆಯಲು ಅವಕಾಶ ಮಾಡಿಕೊಡಬೇಕು.
4. ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯನ್ನು ಕಠಿಣ ಕ್ರಮಗಳ ಮೂಲಕ, ಜನಜಾಗೃತಿಯ ಮೂಲಕ ತಡೆಯಲೇಬೇಕು. ಹೆಣ್ಣು ಭ್ರೂಣಹತ್ಯೆ, ಆಸಿಡ್ ದಾಳಿ, ಅತ್ಯಾಚಾರ, ಬಾಲ್ಯವಿವಾಹ, ಮರ್ಯಾದಾಹೀನ ಹತ್ಯೆ, ವರದಕ್ಷಿಣೆ ಹಿಂಸೆ, ಕೌಟುಂಬಿಕ ದೌರ್ಜನ್ಯ ಮೊದಲಾದ ಲಿಂಗಸಂಬಂಧಿ ದೌರ್ಜನ್ಯಗಳು ಕೊನೆಯಾಗಬೇಕು. ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ, ಗೌರವಯುತವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
5. ಮಹಿಳೆಯರ ಮನೆವಾರ್ತೆಯ ಜವಾಬ್ದಾರಿ ನಿಭಾಯಿಸುವಿಕೆಯು ಉದ್ಯೋಗವೆಂದು ಅಧಿಕೃತವಾಗಿ ಘೋಷಿಸಬೇಕು ಮತ್ತು ದೇಶದ ಒಟ್ಟು ಉತ್ಪಾದನೆಯಲ್ಲಿ ಗೃಹಕೃತ್ಯದ ಪ್ರಾಮುಖ್ಯತೆಯನ್ನು ತಿಳಿಸುವ ಜಾಗೃತಿ ನಡೆಯಬೇಕು. ಆಸ್ತಿ ದಾಖಲೆಗಳಲ್ಲೂ ಮಹಿಳೆಯರಿಗೆ ಸಮಪಾಲು ದೊರೆತು ಹೆಸರು ನಮೂದಾಗಬೇಕು.
6. ಅಶ್ಲೀಲ ಸಾಹಿತ್ಯ, ಸಿನಿಮಾ, ಜಾಲತಾಣಗಳನ್ನು ನಿಷೇಧಿಸಬೇಕು.
7. ಹದಿಹರೆಯದ ಮಕ್ಕಳಿಗೆ ಶಾಲಾಕಾಲೇಜು ಹಂತದಲ್ಲಿ ಅರ್ಥಪೂರ್ಣ ಲೈಂಗಿಕ ಶಿಕ್ಷಣ ಜಾರಿಗೊಳಿಸಿ ಪೋಷಕರಿಗೆ ಅರಿವು ಮೂಡಿಸುವ ಯೋಜನೆ ರೂಪಿಸಬೇಕು. ಲಿಂಗಸಮಾನತೆ ದೃಷ್ಟಿಕೋನದ ಪಠ್ಯಗಳು ಎಲ್ಲೆಡೆ ರಚನೆಯಾಗಬೇಕು.
8. ಮಹಿಳೆ ಮತ್ತು ಮಕ್ಕಳ ಸಾಗಾಟ ತಡೆಗೆ ಕ್ರಮ ಕೈಗೊಳ್ಳಬೇಕು. ಪ್ರತಿ ಜಿಲ್ಲೆಯಲ್ಲಿ ಅತ್ಯಾಚಾರ ತಡೆ ಕಾವಲು ಸಮಿತಿ ರಚನೆಯಾಗಬೇಕು.
9. ತ್ವರಿತ ನ್ಯಾಯಾಲಯಗಳ ಸ್ಥಾಪನೆಯಾಗಿ ಶೀಘ್ರ ನ್ಯಾಯ ದೊರೆಯುವಂತಾಗಬೇಕು.
10. ಮುಟ್ಟು, ವಿಧವಾ ಪದ್ಧತಿಯೇ ಮೊದಲಾದ ರೂಢಿ, ಆಚರಣೆಗಳ ಹೆಸರಿನಲ್ಲಿ ಮಹಿಳೆಯರನ್ನು ಅಗೌರವಿಸುವ, ಹೊರಗಿಡುವ ಶೋಷಿಸುವಂತಹ ಮೌಢ್ಯಾಚರಣೆಗಳ ತಡೆಗಾಗಿ ಜಾಮೀನುರಹಿತ ಕಾಯಿದೆ ರಚನೆಯಾಗಬೇಕು.
11. ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳಿಸಿ, ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
12. ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಮತ್ತು ನೀತಿ ನಿರೂಪಣಾ ಸ್ಥಾನಗಳಲ್ಲಿ ಅವರ ಪ್ರಾತಿನಿಧ್ಯ ಕಡ್ಡಾಯಗೊಳಿಸಬೇಕು.
13. ದೇವದಾಸಿ ಪದ್ಧತಿಯನ್ನು ನಿಷೇಧಿಸುವ ಕಾನೂನು ಜಾರಿಯಾಗಿ 42 ವರ್ಷಗಳಾದರೂ ದೇವದಾಸಿ ಕುಟುಂಬಗಳಿಗೆ ಸಮಗ್ರ ಪುನರ್ವಸತಿ ಒದಗಿಸಲು ಸಾಧ್ಯವಾಗಿಲ್ಲ. ಅಂತಹ ಕುಟುಂಬಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಸಮಗ್ರ ಪುನರ್ವಸತಿ ಕಲ್ಪಿಸಬೇಕು. ದೇವದಾಸಿಯರ ವರ್ತಮಾನದ ಪರಿಸ್ಥಿತಿ ಅರಿಯಲು ಮತ್ತು ಸಂಪೂರ್ಣ ಮಾಹಿತಿ ಕಲೆ ಹಾಕಲು ಸರ್ವೆ ಆಗಬೇಕು. ಮುತ್ತು ಕಟ್ಟಿಸುವ ದೇವದಾಸಿಯರನ್ನಾಗಿ ಮಾಡುವ ಪದ್ಧತಿ ತೆರೆಮರೆಯಲ್ಲಿ ಜಾರಿಯಲ್ಲಿದ್ದು ಅದನ್ನು ಸಂಪೂರ್ಣ ನಿರ್ಬಂಧಿಸಬೇಕು.
14. ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರ ಉದ್ಯೋಗ ಖಾಯಂಗೊಳಿಸಬೇಕು. ಗಾರ್ಮೆಂಟ್ಸ್ ನೌಕರರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತ ವಲಯದ ದುಡಿಮೆಗಾರರಿಗೆ ಬದುಕುವ ವೇತನ, ಲೈಂಗಿಕ ಕಿರುಕುಳ ಮುಕ್ತ ಆರೋಗ್ಯಕರ ಕೆಲಸದ ವಾತಾವರಣ ಸಿಗಲೇಬೇಕು. ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡಬೇಕು.
15. ಯಾವುದೇ ಸ್ವರೂಪದ ಅಸ್ಪೃಶ್ಯತೆ ಕೊನೆಗೊಳ್ಳಬೇಕು. ಅಸ್ಪೃಶ್ಯತೆಯನ್ನು ತಡೆಯಲು ಪರಿಣಾಮಕಾರಿ, ಪರಿವರ್ತನಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಅಸ್ಪೃಶ್ಯತಾ ತಡೆ ಕಾಯಿದೆ ಬಲಗೊಳಿಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು.



16. ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು, ಮ್ಯಾನ್‌ಹೋಲ್ ಮತ್ತು ಮಲದ ಗುಂಡಿಗಳ ಸ್ವಚ್ಛತೆಯ ಯಾಂತ್ರೀಕರಣ, ಶೌಚಾಲಯ ಮತ್ತು ಒಳಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಕಾಲಮಿತಿಯೊಳಗೆ ನಡೆಸಲು ಕ್ರಿಯಾಯೋಜನೆ ರೂಪಿಸಬೇಕು. ಮಲ ಎತ್ತುವ ಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಮಲದ ಗುಂಡಿಗಿಳಿದು ಆಗುವ ಸಾವುಗಳನ್ನು ತಡೆಗಟ್ಟಬೇಕು ಮತ್ತು ಕಾನೂನು ಉಲ್ಲಂಘಿಸಿ ಪಿಟ್‌ಗೆ ಇಳಿಸಿದವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು.
17. ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಜನರ ವಲಸೆ ತಡೆಗಟ್ಟಿ ಸ್ಥಳೀಯವಾಗಿಯೇ ಉದ್ಯೋಗದ ಭದ್ರತೆ ಒದಗಿಸಬೇಕು.
18. ಜಿಲ್ಲೆಯಾದ್ಯಂತ ಸಾಕಷ್ಟು ಕೈಗಾರಿಕೆಗಳಿವೆ. ಅದರಲ್ಲಿ ಸ್ಥಳೀಯ ಯುವಕ, ಯುವತಿಯರಿಗೆ ನಿಗದಿತ ಪ್ರಮಾಣದಲ್ಲಿ ಉದ್ಯೋಗ ಮೀಸಲಿಡಬೇಕು. ಹೊರರಾಜ್ಯಗಳಿಂದ ಬಂದ ಶ್ರಮಜೀವಿ ಕಾರ್ಮಿಕರಿಗೆ ಕಾನೂನುಬದ್ಧವಾಗಿ ಘನತೆಯ ಬದುಕು ನಡೆಸಲು ಸೂಕ್ತವಾಗುವಂತಹ ವೇತನ, ಸುರಕ್ಷತೆ, ವಿಮೆ ಸೌಲಭ್ಯಗಳನ್ನು ನೀಡಬೇಕು.
19. ಮದ್ಯ ವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ.
20. ಕೃಷಿ ಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದು ದಿಕ್ಕೇಡಿಗಳನ್ನಾಗಿಸುವಂತಹ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಆದಿವಾಸಿ ಹೆಂಗಸರ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು. ಭೂಸುಧಾರಣೆ ತಿದ್ದುಪಡಿ ಕಾಯಿದೆ ರದ್ದಾಗಬೇಕು.

21. ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು.

22. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿಪಡಿಸಿ ಕಾಯಿದೆಯಾಗಿಸಬೇಕು.

23. ಪ್ಲಾಸ್ಟಿಕ್, ಅಣು ಮತ್ತು ವಿಷಕಾರಿ ತ್ಯಾಜ್ಯಗಳಿಂದ ಮುಕ್ತವಾದ ಆರೋಗ್ಯಕರ ಪರಿಸರವನ್ನು ಮುಂದಿನ ಪೀಳಿಗೆಗಾಗಿ ಉಳಿಸಲು ಜಾಗೃತಿ, ಸೂಕ್ತ ಕ್ರಮ ಕೈಗೊಳ್ಳಬೇಕು.

**ಸಹಭಾಗಿ ಸಂಘಟನೆಗಳು:**

**ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು; ಕ.ರಾ.ಮ.ದೌ.ವಿ.ಒಕ್ಕೂಟ–ಮೈಸೂರು; ಕ.ರಾ.ಮ.ದೌ.ವಿ.ಒಕ್ಕೂಟ–ಬೆಂಗಳೂರು; ಕ.ರಾ.ಮ.ದೌ.ವಿ.ಒಕ್ಕೂಟ–ವಿಜಯಪುರ: ಕ.ರಾ.ಮ.ದೌ.ವಿ.ಒಕ್ಕೂಟ–ಕೊಪ್ಪಳ; ಕ.ರಾ.ಮ.ದೌ.ವಿ.ಒಕ್ಕೂಟ–ಶಿವಮೊಗ್ಗ; ಕ.ರಾ.ಮ.ದೌ.ವಿ.ಒಕ್ಕೂಟ–ಧಾರವಾಡ; ಕ.ರಾ.ಮ.ದೌ.ವಿ.ಒಕ್ಕೂಟ–ಮಂಡ್ಯ; ಕ.ರಾ.ಮ.ದೌ.ವಿ.ಒಕ್ಕೂಟ–ಕೋಲಾರ; ಕ.ರಾ.ಮ.ದೌ.ವಿ.ಒಕ್ಕೂಟ–ಕಲಬುರಗಿ; ಕ.ರಾ.ಮ.ದೌ.ವಿ.ಒಕ್ಕೂಟ–ತುಮಕೂರು; ಕ.ರಾ.ಮ.ದೌ.ವಿ.ಒಕ್ಕೂಟ–ಉಡುಪಿ.**

**ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಆಲ್ ಇಂಡಿಯಾ ಪ್ರೋಗ್ರೆಸ್ಸಿವ್ ವಿಮೆನ್ಸ್ ಅಸೋಸಿಯೇಷನ್, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಶಕ್ತಿಧಾಮ ಮೈಸೂರು, ಆರ್‌ಎಲ್‌ಎಚ್‌ಪಿ ಮೈಸೂರು, ಧ್ವನಿ ಮಹಿಳಾ ಒಕ್ಕೂಟ, ಮೈಸೂರು; ಕರ್ನಾಟಕ ಪ್ರಾಂತ್ಯ ರೈತ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಕರ್ನಾಟಕ ದಲಿತ ಮಹಿಳಾ ವೇದಿಕೆ, ಕರ್ನಾಟಕ ಜನಶಕ್ತಿ, ನ್ಯಾಶನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಎಸ್.ಎಫ್.ಐ., ಡಿವೈಎಫ್‌ಐ, ಎಐಟಿಯುಸಿ, ಸಿಐಟಿಯು, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ವಿಮೋಚನಾ ಬೆಂಗಳೂರು, ಗಮನ ಮಹಿಳಾ ಸಮೂಹ, ಸಿಐಇಡಿಎಸ್, ವಿಮೆನ್ಸ್ ವಾಯ್ಸ್, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು ಬೆಂಗಳೂರು, ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಫೆಡಿನಾ, ಅನೇಕ ಬೆಂಗಳೂರು, ಒಂದೆಡೆ ಬೆಂಗಳೂರು, ಪಯಣ, ಸ್ವರಾಜ್ ನೆಟ್‌ವರ್ಕ್, ವಿಸ್ತಾರ್, ಸಂಚಲನ ಕರ್ನಾಟಕ, ಸಂವಾದ, ಸ್ಲಂ ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ. ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಟಿಯು, ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ–ದಕ್ಷಿಣ ಕನ್ನಡ, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಸ್ಪಂದನ ಮಂಡ್ಯ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ದಲಿತ ಕಲಾ ಮಂಡಳಿ ಗದಗ, ಜಾಗೃತ ಮಹಿಳಾ ಒಕ್ಕೂಟ, ಖಾನಾಪುರ, ಸಬಲ ವಿಜಯಪುರ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ–ಕರ್ನಾಟಕ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ.**

ವಿಜಯನಗರ ಜಿಲ್ಲೆಯ ಸಂಘಟನೆಗಳು:

**ಹೊಸಪೇಟೆ ಸ್ಲಂ ಜನಜಾಗೃತಿ ಆಂದೋಲನ ಸಮಿತಿ–ವಿಜಯನಗರ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ–ವಿಜಯನಗರ,ಯುವಧ್ವನಿ ಯುವಜನರ ಒಕ್ಕೂಟ–ಹೊಸಪೇಟೆ, ಹಣತೆ ಬಳಗ–ಹೊಸಪೇಟೆ, ಜನವಾದಿ ಮಹಿಳಾ ಸಂಘಟನೆ–ವಿಜಯನಗರ, ದಲಿತ ವಿದ್ಯಾರ್ಥಿ ಪರಿಷತ್ತು ಕರ್ನಾಟಕ, ಭಾರತ ಜ್ಞಾನ ವಿಜ್ಞಾನ ಸಮಿತಿ ಕರ್ನಾಟಕ (ರಿ) ತಾಲ್ಲೂಕು ಘಟಕ–ಹೊಸಪೇಟೆ, ಕರ್ನಾಟಕ ರಾಜ್ಯ ಮಹಿಳಾ ತರಬೇತುದಾರರ ಸಂಚಲನ(ರಿ), ಹೆಚ್‌ಐಡಿ ಫೋರಂ–ಬೆಂಗಳೂರು, ಅಖಿಲಾ ಭಾರತ ಶರಣ ಸಾಹಿತ್ಯ ಪರಿಷತ್ತು–ವಿಜಯನಗರ, ಕದಳಿ ಮಹಿಳಾ ವೇದಿಕೆ–ವಿಜಯನಗರ ಜಿಲ್ಲೆ, ರೂಪಾಂತರ ವೇದಿಕೆ–ವಿಜಯನಗರ, ಅಜೀಂ ಪ್ರೇಂಜಿ ಫೌಂಡೇಷನ್–ವಿಜಯನಗರ, ಸಿಡಬ್ಲ್ಯುಸಿ – ವಿಜಯನಗರ ಜಿಲ್ಲೆ, ಗ್ರಾಕೂಸ್ ಕೂಲಿ ಕಾರ್ಮಿಕರ ಸಂಘಟನೆ–ವಿಜಯನಗರ, ವಾಹಿನಿ ಅಭಿವೃದ್ದಿ ಸೊಸೈಟಿ–ಹೊಸಪೇಟೆ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೊಸೈಟಿ–ಹೊಸಪೇಟೆ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ–ಹೊಸಪೇಟೆ, ಸಮಾನತೆ ಟ್ರಸ್ಟ್–ಹೊಸಪೇಟೆ, ವಿಕಾಸ್ ಸಹಕಾರಿ ಬ್ಯಾಂಕ್–ಹೊಸಪೇಟೆ, ರೋಟರಿ ಕ್ಲಬ್ ಹೊಸಪೇಟೆ, ಮೈರಾಡ–ಬಳ್ಳಾರಿ, ವಿಮುಕ್ತಿ ಏಡ್ಸ್ ತಡೆಗಟ್ಟು ಮಹಿಳಾ ಸಂಘ–ಬಳ್ಳಾರಿ, ಸಾವಿತ್ರಿ ಬಾ ಫುಲೆ ಮಹಿಳಾ ಸಂಘಟನೆ–ಹೊಸಪೇಟೆ, ಆಲ್ಫಾ ಹೆಲ್ತ್ ಎಜುಕೇಷನ್ ಅಂಡ್ ರೂರಲ್ ಡೆವಲಪ್ಮೆಂಟ್ ಫೌಂಡೇಷನ್–ಕೊಪ್ಪಳ, ಅಂಗಳ ಟ್ರಸ್ಟ್–ಕೊಪ್ಪಳ, ಆಸರೆ ಮಹಿಳಾ ಗ್ರಾಮೀಣ ಅಭಿವೃದ್ದಿ ಸಂಸ್ಥೆ–ಹರಪನಹಳ್ಳಿ, ಸ್ಪಂದನ–ಕೂಡ್ಲಿಗಿ, ಸೌಖ್ಯ ಬೆಳಕು ಸಮುದಾಯ ಸಂಸ್ಥೆ–ವಿಜಯನಗರ, ಸ್ಪೂರ್ತಿ ಸಮುದಾಯ ನಿರ್ವಹಿತ ಸಂಪನ್ಮೂಲ ಸಂಸ್ಥೆ–ಕೂಡ್ಲಿಗಿ, ಕಟ್ಟಡ ಕಾರ್ಮಿಕರ ಸಂಘ–ಕೂಡ್ಲಿಗಿ, ಕರ್ನಾಟಕ ರಾಜ್ಯ ರೈತ ಸಂಘ–ವಿಜಯನಗರ, ಭಾರತೀಯ ಮಹಿಳಾ ಒಕ್ಕೂಟ–ವಿಜಯನಗರ, ಅಖಿಲ ಭಾರತ ಕಿಸಾನ್ ಸಭಾ–ವಿಜಯನಗರ, ಕನ್ನಡ ಸಾಹಿತ್ಯ ಪರಿಷತ್–ತಾಲ್ಲೂಕು ಘಟಕ–ಕೂಡ್ಲಿಗಿ, ಕಾರ್ಯನಿರತ ಪರ್ತಕರ್ತರ ಸಂಘ–ಕೂಡ್ಲಿಗಿ, ಕರ್ನಾಟಕ ರಕ್ಷಣಾ ವೇದಿಕೆ–ಕೂಡ್ಲಿಗಿ, ಕರ್ನಾಟಕ ಮಾದಿಗ ದಂಡೋರ ಹೋರಾಟ ಸಮಿತಿ–ಕೂಡ್ಲಿಗಿ, ಡಾ.ಬಿ.ಆರ್.ಅಂಬೇಡ್ಕರ್ ಸಂಘಟನಾ ಸಮಿತಿ–ಕೂಡ್ಲಿಗಿ, ದಲಿತ ಸಂಘರ್ಷ ಸಮಿತಿ–ವಿಜಯನಗರ, ಆಲ್ ಇಂಡಿಯಾ ಯುಟಿಎಸ್–ಸಂಘಟನಾ ಸಮಿತಿ–ಕೂಡ್ಲಿಗಿ, ಅಲ್ಪಸಂಖ್ಯಾತರ ಹೋರಾಟ ಸಮಿತಿ–ಕೂಡ್ಲಿಗಿ, ಪೌರಕಾರ್ಮಿಕ ಹೋರಾಟ ಸಮಿತಿ–ಕೂಡ್ಲಿಗಿ, ನವಚೇತನ ಮಹಿಳಾ ಸ್ವ ಸಹಾಯ ಸಂಘ–ಕೂಡ್ಲಿಗಿ, ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸಂಘ(ರಿ) ಹರಪನಹಳ್ಳಿ, ಡಾನ್ ಬಾಸ್ಕೋ ಸಂಸ್ಥೆ–ಹೊಸಪೇಟೆ, ತರುಣಿ ಮಹಿಳಾ ಅಭಿವೃದ್ದಿ ಸಂಸ್ಥೆ–ಹೊಸಪೇಟೆ, ಗ್ರಾಮ ಗಣರಾಜ್ಯ ವೇದಿಕೆ–ಹರಪನಹಳ್ಳಿ, ಪೀಪಲ್ ಸಂಸ್ಥೆ–ಹರಪನಹಳ್ಳಿ, ಸಾಂತ್ವನ ಕೇಂದ್ರ–ಹರಪನಹಳ್ಳಿ, ಪರಿವರ್ತನ ಚಾರಿಟೇಬಲ್ ಟ್ರಸ್ಟ್–ಹಗರಿಬೊಮ್ಮನಹಳ್ಳಿ.**

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ. ಸಮತೆ ಸಾಮರಸ್ಯದ ನಾಡ ಕಟ್ಟೋಣ.**

***"ಕೈಗೆ ಕೈ ಜೋಡಿಸಿ ನ್ಯಾಯಯುತ ಸಮಾಜ ಕಟ್ಟೋಣ"***

(ವಿ.ಸೂ.: ಜಾಥಾದಲ್ಲಿ ಭಾಗವಹಿಸುವ ಎಲ್ಲ ಸಹಭಾಗಿಗಳು ತಂತಮ್ಮ ಬ್ಯಾನರ್ ತಂದುಕೊಳ್ಳಬೇಕು.)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ನಸ್ರೀನ್ – 9902546889; ನೇತ್ರಾ–8904237526; ಆಶಾಲತ ಬೇಕಲ್–9480288856; ಸೈಯದ್ ಹೈದರ್ – 9481046051; ಸೌಭಾಗ್ಯಲಕ್ಷ್ಮಿ–8762950300; ಅಸ್ಮಾ – 9901830727; ರಾಜು ಶೇಕ್ – 7090807997; ಸರೋಜ–9481684663; ಶಂಶಾದ್–9880841507; ಕೊಟ್ರಮ್ಮ – 9008283789; ಅಂಕ್ಲೇಶ್ – 9606438405; ಮಹೇಶ್ ದೇವರಮನೆ – 9980719617; ಎಂ. ಕೆ. ಸಾಹೇಬ್ ನಾಗೇಶನಹಳ್ಳಿ – 6364590198; ವಾಣಿ ಪೆರಿಯೋಡಿ–9448481340; ಲಿನೆಟ್ ಡಿಸಿಲ್ವ–9449207919; ಗೌರಿ –8971232329.**